## ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/2336/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 06/04/2022

8

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಆರ್. ಕೆ. ಮಹಾದೇವಸ್ವಾಮಿ ಬಿನ್ ಲೇಟ್ ಕುಮಾರಯ್ಯ, ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶಿವಮೊಗ್ಗ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1. ಶಿವಮೊಗ್ಗ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಎದುರುದಾರರಾದ ಶ್ರೀ ಆರ್. ಕೆ. ಮಹಾದೇವಸ್ವಾಮಿ ಬಿನ್ ಲೇಟ್ ಕುಮಾರಯ್ಯ, ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶಿವಮೊಗ್ಗ ಜಿಲ್ಲೆ ಸರ್ಕಾರಿ/ಸಾರ್ವಜನಿಕ ನೌಕರಾಗಿರುತ್ತಾರೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಶ್ರೀ ವಿಜಯನಾಯ್ಕ ತಂದೆ ಪೂರ್‍ಯಾನಾಯ್ಕ, ವಾಸ: ಹೊಳೆಬೆನವಳ್ಳಿ ದೊಡ್ಡತಾಂಡ, ಶಿವಮೊಗ್ಗ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸವನ್ನು ಮಾಡಿಕೊಡಲು ಲಂಚದ ಹಣ ಕೇಳಿ ಪಡೆದುಕೊಂಡು ದುರ್ನಡತೆ ತೋರಿಸಿರುತ್ತಾರೆ ಎಂದು ಸಲ್ಲಿಸಿದ ವರದಿಯ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಳ್ಳಲಾಗಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ**:- ದೂರುದಾರರು 2016-17 ನೇ ಸಾಲಿನಲ್ಲಿ ಕಾರ್ ಲೋನ್ ಪಡೆಯಲು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶಿವಮೊಗ್ಗ ಜಿಲ್ಲೆ ರವರಲ್ಲಿ ಸಾಲ ಮತ್ತು ಸಹಾಯಧನಕ್ಕಾಗಿ ದಿ: 13/05/2016 ರಂದು ಅರ್ಜಿ ಸಲ್ಲಿಸಿದಂತೆ ಅರ್ಹ ಅಭ್ಯರ್ಥಿಗಳ ಆಯ್ಕೆಯ ಮೊದಲ ಪಟ್ಟಿಯಲ್ಲಿ ದೂರುದಾರರ ಹೆಸರು ಇರಲಿಲ್ಲ. ನಂತರ ಹೆಚ್ಚುವರಿ ಪಟ್ಟಿಯನ್ನು ಪ್ರಕಟಿಸಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಕಛೇರಿಯಲ್ಲಿ ಲಗತ್ತಿಸಿರುತ್ತಾರೆ ಎಂದು ದೂರುದಾರರಿಗೆ ತಿಳಿಸಿದ ನಂತರ ಅವರು ಈಗ್ಗೆ

ಒಂದು ತಿಂಗಳ ಹಿಂದೆ ಕಛೇರಿಗೆ ಹೋಗಿ ನೋಡಿದಾಗ ಹೆಚ್ಚುವರಿ ಪಟ್ಟಿಯಲ್ಲಿ ಮೊದಲನೆ ಹೆಸರು ಅವರದ್ದಾಗಿರುತ್ತದೆ. ಈ ಬಗ್ಗೆ ಕಛೇರಿಯಲ್ಲಿ ವಿಚಾರಿಸಿದಾಗ ನಿಮಗೆ ಕಾರ್ ಲೋನ್‌ಗಾಗಿ ಸರ್ಕಾರದಿಂದ 7 ಲಕ್ಷ ರೂ. ಮಂಜೂರು ಮಾಡಿದ್ದು ಉಳಿದ 3,50,000/- ರೂ.ಗಳನ್ನು ನೀವು ಬ್ಯಾಂಕಿನಲ್ಲಿ ಸಾಲವಾಗಿ ಪಡೆದು ವಿವಿಧ ಕಂತಿನ ರೂಪದಲ್ಲಿ ತೀರಿಸಬೇಕಾಗುತ್ತದೆ ಎಂದು ತಿಳಿಸಿ ನೆಹರು ರಸ್ತೆ ಕೆನರಾ ಬ್ಯಾಂಕಿಗೆ ಪತ್ರವನ್ನು ಈ ಕಛೇರಿಯಿಂದ ಕಳುಹಿಸಿಕೊಡಲಾಗಿದೆ ಎಂದು ಹೇಳಿ ಸದರಿ ಪತ್ರದ ಜೆರಾಕ್ಸ್ ಪ್ರತಿಯನ್ನು ದೂರುದಾರರಿಗೆ ನೀಡಿರುತ್ತಾರೆ. ಈ ಸಂಬಂಧ ದೂರುದಾರರು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಎದುರುದಾರರನ್ನು ಭೇಟಿ ಮಾಡಿ ತನಗೆ ಕಾರ್ ಲೋನ್ ಸಹಾಯಧನದ 3,50,000/- ರೂ.ಗಳ ತುರ್ತು ಅವಶ್ಯಕತೆ ಇದೆ ಹಾಗಾಗಿ ಬೇಗನೆ ಮಂಜೂರು ಮಾಡಲು ಕೋರಿದಾಗ ಎದುರುದಾರರು ಮೇಲ್ಕಂಡ 3,50,000/- ರೂ. ಹಣದ ಸಬ್ಸಿಡಿ ಚೆಕ್ ನ್ನು ಕೊಡಲು 50,000/- ರೂ. ಲಂಚ ಕೊಡಬೇಕೆಂದು ಕೇಳಿರುತ್ತಾರೆ. ದೂರುದಾರರು ಕಷ್ಟವಾದರೂ ಪರವಾಗಿಲ್ಲ, ಜೋಡಿಸಿಕೊಂಡು ಬಂದು ಕೊಡೋಣ ಎಂದು ತೀರ್ಮಾನಿಸಿ ಆದಷ್ಟು ಬೇಗ ಚೆಕ್ಕನ್ನು ಕೊಡಲು ವಿನಂತಿಸಿಕೊಂಡು ವಾಪಸ್ ಬಂದಿರುತ್ತಾರೆ. ಆ ದಿನ ದೂರುದಾರರು ಖರ್ಚಿಗಾಗಿ ತಂದಿದ್ದ 10,000/- ರೂ.ಗಳನ್ನು ಎದುರುದಾರರ ಕಾರ್ ಚಾಲಕನಾದ ಕುಮಾರ್ ನಾಯ್ಕರವರಿಗೆ ಎದುರುದಾರರಿಗೆ ಕೊಡುವಂತೆ ಹೇಳಿ ಕೊಟ್ಟು ಸಿಬ್ಬಂದಿಯಾದ ಕಾಂತೇಶ್ ರವರಿಗೂ ಸಹ 5,000/- ರೂ. ಹಣವನ್ನು ಕೊಟ್ಟು ಬಂದಿರುತ್ತಾರೆ. ದಿ: 27/03/2017ರಂದು ದೂರುದಾರರು ಚಾಲಕನಾದ ಕುಮಾರ ನಾಯ್ಕರವರಿಗೆ ಫೋನ್ ಮಾಡಿ ಕಾರ್ ಲೋನ್ ಬಗ್ಗೆ ಕೇಳಿದಾಗ ಲೋನ್ ಮಂಜೂರಾಗಿದೆ, ಸಾಹೇಬರನ್ನು ರೂಮಿನಲ್ಲಿ ಭೇಟಿ ಮಾಡಿ ಸಾಹೇಬರಿಗೆ ಕೊಡಬೇಕಾದ 50,000/- ರೂ. ಹಣ ನಾಳೆ ಬೆಳಿಗ್ಗೆ ತಂದು ಕೊಟ್ಟು ಚೆಕ್ ತೆಗೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಅದರಂತೆ ಅವರು ಈ ದಿನ ಬೆಳಿಗ್ಗೆ 7-45 ಘಂಟೆಗೆ ಶಿವಮೊಗ್ಗಕ್ಕೆ ಬಂದು ಎದುರುದಾರರು ತಂಗಿರುವ ಸರ್ಕಾರಿ ನೌಕರರ ಭವನದ ಮುಂದೆ ಕಾಯುತ್ತಾ ನಿಂತಿರುವಾಗ ಎದುರುದಾರರು ಹೊರಗೆ ಬಂದಿದ್ದು ಆಗ ದೂರುದಾರರು ಎದುರುದಾರರನ್ನು ಮಾತನಾಡಿಸಿದಾಗ ಎದುರುದಾರರು ಈ ಹಿಂದೆ ಮಾತನಾಡಿದಂತೆ 50,000/- ರೂ. ಹಣ ತಂದುಕೊಟ್ಟು ಚೆಕ್ ಪಡೆದುಕೊಂಡು ಹೋಗುವಂತೆ ತಿಳಿಸಿದ ಸಂಭಾಷಣೆಯನ್ನು ದೂರುದಾರರು ತಮ್ಮ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 28/03/2017 ರಂದು ಬೆಳಿಗ್ಗೆ 11-45 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಶಿವಮೊಗ್ಗ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 04/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4. ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀಮತಿ ಎನ್.ಚಂದ್ರಕಲಾ ಕೋಂ ಲೋಕೇಶ ಮತ್ತು ಶ್ರೀ ಹೆಚ್.ಇ ಬಸವರಾಜಪ್ಪ ಬಿನ್ ಎಮ್ ಈಶ್ವರಪ್ಪ ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯಿಸಿ ಪ್ರಥಮ ವರ್ತಮಾನ ವರದಿಯನ್ನು ಪಂಚರಿಗೆ ತೋರಿಸಿ ದೂರನ್ನು ಓದಿ ಹೇಳಿರುತ್ತಾರೆ. ಆ ನಂತರ ತನಿಖಾಧಿಯವರ ಸೂಚನೆ ಮೇರೆಗೆ ಎದುರುದಾರರು ಲಂಚವನ್ನು ಕೇಳಿರುವುದಕ್ಕೆ ಸಂಬಂಧಿಸಿದ ವಾಯ್ಸ್ ರೆಕಾರ್ಡ ಆಗಿರುವ ಮೊಬೈಲ್‌ನ್ನು ದೂರುದಾರರು ಹಾಜರಪಡಿಸಿದಾಗ ತನಿಖಾಧಿಕಾರಿಯವರು ಮೊಬೈಲ್‌ನ್ನು ಡಾಟಾ ಕೇಬಲ್ ಮೂಲಕ ಕಂಪ್ಯೂಟರ್‌ಗೆ ಹಾಕಿ ಆನ್ ಮಾಡಿ ಪಂಚರಿಗೆ ಕೇಳಿಸಿ ಸಂಭಾಷಣೆಯನ್ನು ಡೌನಲೋಡ್ ಮಾಡಿಕೊಂಡು ನಂತರ ಎರಡು ಸಿಡಿಗಳಿಗೆ ಸದರಿ ಸಂಭಾಷಣೆಯನ್ನು ಕಾಪಿ ಮಾಡಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರಿಗೆ ಲಂಚವಾಗಿ ಕೊಡಬೇಕೆಂದಿರುವ ರೂ.40,000/- ಗಳನ್ನು ಹಾಜರಪಡಿಸುವಂತೆ ದೂರುದಾರರಿಗೆ ತಿಳಿಸಿದಾಗ ದೂರುದಾರರು ರೂ.2,000/- ಮುಖಬೆಲೆಯ 20 ನೋಟುಗಳನ್ನು ಟೇಬಲ್ ಮೇಲೆ ಹಾಜರಪಡಿಸಿದಾಗ ಪಂಚರು ಅವುಗಳನ್ನು ಪರಿಶೀಲಿಸಿ ಮೌಲ್ಯ ಮತ್ತು ಕ್ರಮ ಸಂಖ್ಯೆಗಳನ್ನು ನಮೂದಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಅವರ ಕಛೇರಿಯ ಸಿಬ್ಬಂದಿಯವರು ದೂರುದಾರರು ಹಾಜರಪಡಿಸಿದ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ತೆಳುವಾಗಿ ಸವರಿರುತ್ತಾರೆ. ಆ ನಂತರ ಪಂಚ ಸಾಕ್ಷಿ-1 ರವರು ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ತಮ್ಮ ಬಲಗೈಯಿಂದ ತೆಗೆದುಕೊಂಡು ಎರಡು ಕೈಗಳಿಂದ ಏಣಿಸಿ ತನಿಖಾಧಿಕಾರಿಗಳ ಟೇಬಲ್ ಮೇಲೆ ಇಟ್ಟ ನಂತರ ಅವರು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ತಮ್ಮ ಎರಡು ಕೈಗಳ ಬೆರಳುಗಳನ್ನು ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ-1 ರವರು ದೂರುದಾರರನ್ನು ವಿಚಾರಣೆ ಮಾಡಿದಾಗ ದೂರುದಾರರ ಹತ್ತಿರ ಈ ಪ್ರಕರಣದ ಪ್ರಥಮ ವರ್ತಮಾನದ ವರದಿಯ ಪ್ರತಿ, ಡಿಎಲ್, ಪರ್ಸ್, ಕರ್ಚಿಪ್ ಮತ್ತು ರೂ. 280/- ಗಳು ಇರುತ್ತವೆಂದು ತಿಳಿಸಿದಾಗ ಪಂಚ-1 ರವರು ಫಿನಾಪ್ತಲಿನ್ ಪುಡಿಯನ್ನು ಸವರಿದ ರೂ. 40,000/- ಗಳನ್ನು ದೂರುದಾರರ ಪ್ಯಾಂಟಿನ ಬಲಭಾಗದ ಮುಂಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ದೂರುದಾರರು ಎದುರುದಾರರನ್ನು ಭೇಟಿ ಮಾಡಿ ಕಾರ್ ಲೋನ್ ಸಹಾಯ ಧನದ ಚೆಕ್ ಬಗ್ಗೆ ಕೇಳಬೇಕು ಆಗ ಎದುರುದಾರರು ಚೆಕ್ ಕೊಡಲು ಲಂಚದ ಬಗ್ಗೆ ಪ್ರಸ್ತಾಪಿಸಿದರೆ ಅವರಿಗೆ ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ಕೊಡಬೇಕೆಂದು, ಆ ನೋಟುಗಳನ್ನು ಎದುರುದಾರರು ಸ್ವೀಕರಿಸಿದರೆ ಕರ್ಚಿಪ್‌ನಲ್ಲಿ ತಮ್ಮ ಮುಖವನ್ನು ಒರೆಸಿಕೊಳ್ಳುವುದರ ಮೂಲಕ ಸನ್ನೆ ಮಾಡುವಂತೆ ದೂರುದಾರರಿಗೆ ಸೂಚನೆ ನೀಡಿರುತ್ತಾರೆ. ಪಂಚ-2 ರವರಿಗೆ ಆ ಸಂಧರ್ಭದಲ್ಲಿ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ದೂರುದಾರರು ಮತ್ತು ಎದುರುದಾರರ

ನಡುವೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಂಡು ಮತ್ತು ವಿದ್ಯಾಮಾನಗಳನ್ನು ಗಮನಿಸಿ ನಂತರ ಈ ಬಗ್ಗೆ ವರದಿ ಮಾಡಬೇಕೆಂದು ಸೂಚನೆ ನೀಡಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಗೆ ಎದುರುದಾರರನ್ನು ಭೇಟಿ ಮಾಡಲು ಹೋಗುವಾಗ ತಮ್ಮ ಮೊಬೈಲನ್ನು ಆನ್ ಮಾಡಿಕೊಂಡು ಹೋಗಿ ರೆಕಾರ್ಡ್ ಮಾಡಲು ತಿಳಿಸಿರುತ್ತಾರೆ. ಆ ನಂತರ ಎಲ್ಲರೂ ಸೋಪು ಮತ್ತು ಡಿಸ್ಟಿಲ್ ವಾಟರ್‌ನಿಂದ ಶುಭ್ರವಾಗಿ ಕೈಗಳನ್ನು ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 28/03/2017 ರಂದು ಮಧ್ಯಾಹ್ನ 12-45 ಘಂಟೆಯಿಂದ 2-00 ಘಂಟೆಯವರೆಗೆ ಶಿವಮೊಗ್ಗ ಜಿಲ್ಲೆ ಎಸಿಬಿ ಕಛೇರಿಯಲ್ಲಿ ಕಂಪ್ಯೂಟರ್ ಮೂಲಕ ಗಣಕೀಕರಣ ಮಾಡಿದ ವಹಿಸುವಿಕೆ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

5. ದಿನಾಂಕ 28/03/2017 ರಂದು ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಠಾಣೆಯ ವಾಹನಗಳಲ್ಲಿ ಪೋಲಿಸ್ ಠಾಣೆಯಿಂದ ಹೊರಟು ಮಧ್ಯಾಹ್ನ 2-35 ಘಂಟೆಗೆ ಶಿವಮೊಗ್ಗ ನಗರದ ಜಯನಗರ ಪೋಲೀಸ್ ಠಾಣೆಯ ಹತ್ತಿರ ಸ್ವಲ್ಪ ದೂರದಲ್ಲಿ ವಾಹನಗಳನ್ನು ನಿಲ್ಲಿಸಿ ತನಿಖಾಧಿಕಾರಿಗಳು ದೂರುದಾರರು ಮತ್ತು ನೆರಳು ಸಾಕ್ಷಿಯಾದ ಶ್ರೀ ಹೆಚ್. ಇ .ಬಸವರಾಜಪ್ಪ ಇವರನ್ನು ವಾಹನದಿಂದ ಇಳಿಸಿ ವಹಿಸಿಕೊಡುವ ಪಂಚನಾಮೆ ನೀಡಿದ ಸೂಚನೆಯಂತೆ ನಡೆದುಕೊಳ್ಳಬೇಕೆಂದು ತಿಳಿಸಿದಾಗ ಅವರಿಬ್ಬರೂ ಕಾಲು ನಡಿಗೆಯಲ್ಲಿ ಜಯನಗರ ಪೋಲೀಸ್ ಠಾಣೆಯ ಎದುರು ಇರುವ ಅರಸ ಹೊಟೇಲ್ ಹತ್ತಿರ ಹೋದಾಗ ಎದುರುದಾರರು ಹೊಟೇಲ್‌ನಿಂದ ಹೊರ ಬರುತ್ತಿದ್ದವರು ದೂರುದಾರರನ್ನು ನೋಡಿ ದುಡ್ಡು ತಂದೆನೋ ಅಂತ ಕೇಳಿರುತ್ತಾರೆ. ಆಗ ದೂರುದಾರರು ತಂದಿದೀನಿ ಸಾರ್ ಅಂತ ಹೇಳಿ ತಮ್ಮ ಪ್ಯಾಂಟಿನ ಬಲಭಾಗದ ಮುಂಭಾಗದ ಜೇಬಿನಿಂದ ಹಣ ತೆಗೆದುಕೊಡಲು ಹೋದಾಗ ಎದುರುದಾರರು ದೂರುದಾರರಿಗೆ ಏಯ್ ಒಳಗೆ ಹಾಕ್ಕೋ ಇಲ್ಲಿ ತೆಗಿಬೇಡ, ಜೀಪಲ್ಲಿ ನಮ್ಮ ಡ್ರೈವರ್ ಕುಮಾರ ಇದಾನೆ ಅವನ ಕೈಯಲ್ಲಿ ಕೊಡು ಎಂದು ಹೇಳಿದಾಗ ದೂರುದಾರರು ಜೀಪ್ ಹತ್ತಿರ ಹೋಗಿ ಚಾಲಕರ ಸೀಟಿನಲ್ಲಿ ಕುಳಿತಿದ್ದ ಡ್ರೈವರ್ ಕುಮಾರ ಕೈಯಲ್ಲಿ ಎದುರುದಾರರು ಕೇಳಿದ ಲಂಚದ ಹಣವಾದ ಪಿನಾಫ್ತಲಿನ್ ಪುಡಿಯನ್ನು ಸವರಿದ 40,000/- ರೂ.ಗಳನ್ನು ನೀಡಿದಾಗ ಅವರು ಲಂಚದ ಹಣವನ್ನು ತಮ್ಮ ಬಲಗೈಯಿಂದ ಪಡೆದು ಎಡಗೈಯಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ಅವರಿಗೆ ವಹಿಸಿಕೊಡುವ ಪಂಚನಾಮೆ ಕಾಲಕ್ಕೆ ತನಿಖಾಧಿಕಾರಿಗಳು ಅವರಿಗೆ ನೀಡಿದ ಸೂಚನೆಯ ಪ್ರಕಾರ ತಮ್ಮ ಕರ್ಚೀಫ್‌ನಿಂದ ಮುಖ ವರೆಸಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಎದುರುದಾರರನ್ನು ಹಾಗೂ ಚಾಲಕ ಕುಮಾರ್‌ರವರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ

ತೊಳೆದಾಗ ದ್ರಾವಣದ ಬಣ್ಣವು ಬದಲಾವಣೆಯಾಗಿರುವುದಿಲ್ಲ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ ಎದುರುದಾರರು ತನಿಖಾಧಿಕಾರಿಗೆ ಹಣವು ನನ್ನ ಬಳಿ ಇರುವುದಿಲ್ಲ, ಚಾಲಕ ಕುಮಾರ್‌ರವರ ಹತ್ತಿರ ಇದೆ ಎಂದು ತಿಳಿಸಿದಾಗ ತನಿಖಾಧಿಕಾರಿಗಳು ಚಾಲಕನಿಗೆ ಲಂಚದ ಹಣವನ್ನು ಹಾಜರುಪಡಿಸಲು ತಿಳಿಸಿದಾಗ ಅವರು ಹಾಜರುಪಡಿಸಿದ ಲಂಚದ ಹಣವನ್ನು ತನಿಖಾಧಿಕಾರಿಗಳು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳು ಚಾಲಕ ಕುಮಾರನ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣದ ಬಣ್ಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ಪ್ರಕಾರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣದ ಬಣ್ಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ತನಿಖಾಧಿಕಾರಿಗಳು ದೂರುದಾರರಿಗೆ ವಹಿಸಿಕೊಡುವ ಪಂಚನಾಮೆ ಕಾಲದಲ್ಲಿ ಎದುರುದಾರರನ್ನು ಭೇಟಿ ಮಾಡುವ ಸಮಯದಲ್ಲಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ದೂರುದಾರರಿಗೆ ನೀಡಿದ್ದ ಮೊಬೈಲ್‌ನ್ನು ಹಾಜರುಪಡಿಸಲು ಹೇಳಿದಾಗ ದೂರುದಾರರು ಅದನ್ನು ಹಾಜರುಪಡಿಸಿರುತ್ತಾರೆ. ಆಗ ತನಿಖಾಧಿಕಾರಿಗಳು ಮೊಬೈಲನ್ನು ಡಾಟಾ ಕೇಬಲ್ ಮುಖಾಂತರ ಕಂಪ್ಯೂಟರಿಗೆ ಹಾಕಿ ಸಂಭಾಷಣೆಯನ್ನು ಕೇಳಿದಾಗ ಅದರಲ್ಲಿ ಸಂಭಾಷಣೆ ರೆಕಾರ್ಡ್ ಆಗದೇ ಇರುವುದು ಕಂಡುಬಂದಿರುತ್ತದೆ. ನೆರಳು ಸಾಕ್ಷಿದಾರರನ್ನು ಘಟನೆ ಬಗ್ಗೆ ಕೇಳಿದಾಗ ಅವರು ಸದರಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿರುವುದಾಗಿ ಹೇಳಿರುತ್ತಾರೆ. ತನಿಖಾಧಿಕಾರಿಗಳು ಎದುರುದಾರರಿಗೆ ಸ್ವರಕ್ಷಣಾ ಸಮಜಾಯಿಷಿಯನ್ನು ಬರೆದುಕೊಡುವಂತೆ ತಿಳಿಸಿದಾಗ ಎದುರುದಾರರು ಬರೆದುಕೊಟ್ಟ ಸಮಜಾಯಿಷಿಯಲ್ಲಿ "ಅರಸು ವೆಜ್ ಹೊಟೇಲಿನಲ್ಲಿ ಊಟ ಮುಗಿಸಿ ಹೊರ ಬಂದ ನಂತರ ಒಬ್ಬ ವ್ಯಕ್ತಿ ಬಂದು ಸಾರ್ ನಿಮಗೆ ಹಣ ನೀಡಬೇಕೆಂದು ಹೇಳಿದಾಗ ನನಗೆ ಹಣ ಬೇಡ ಎಂದು ನಿರಾಕರಿಸಿದೆ. ನಾನು ನಿರಪರಾಧಿ, ನಾನು ಯಾರಿಂದಲೂ ಹಣಕ್ಕಾಗಿ ಪೀಡಿಸಿಲ್ಲ ಹಾಗೂ ಹಣ ಮುಟ್ಟಿರುವುದಿಲ್ಲ" ಎಂದು ಬರೆದುಕೊಟ್ಟ ಸಮಜಾಯಿಷಿಯ ಮೇಲೆ ಪಂಚರು, ದೂರುದಾರರು ಹಾಗೂ ತನಿಖಾಧಿಕಾರಿಗಳು ಸಹಿ ಮಾಡಿ ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ. ಕಾರ್ ಚಾಲಕ ಕುಮಾರ ಕೆ. ಇವರು ತಮ್ಮ ಸ್ವ ರಕ್ಷಣಾ ಹೇಳಿಕೆಯಲ್ಲಿ "ಈ ದಿನದ ದೂರಿನ ವಿಷಯ ನನ್ನ ಮೇಲೆ ದಾವೆ ಮಾಡಿರುವ ವ್ಯಕ್ತಿಯೇ ಬಂದು ನಿಮ್ಮ ಸಾಹೇಬ್ರು ಹಣ ಕೊಟ್ಟು ಕಳುಹಿಸಿದ್ದಾರೆ, ತಗೊಳ್ಳಿ ಅಂತ ಹೇಳಿದ ನಮ್ಮ ಅಧಿಕಾರಿಗಳು ಯು.ಆರ್.ಎಸ್. ಹೊಟೇಲಿಗೆ ಊಟಕ್ಕೆ ಹೋಗಿದ್ದರು, ನಾನು ವಾಹನದಲ್ಲಿ ಕುಳಿತುಕೊಂಡಿದ್ದೆ. ದಾವೆ ಹೂಡಿದ ವ್ಯಕ್ತಿ ಹಣ ವಾಹನದಲ್ಲಿ ಇಟ್ಟು ಹೋಗಿದ್ದು ಅಷ್ಟು ಗೊತ್ತು, ಪ್ರಶ್ನೆ ಮಾಡಿದ್ದಕ್ಕೆ ನಿಮ್ಮ ಸಾಹೇಬ್ರು ಕೊಟ್ರು" ಅಂತ ಬರೆದುಕೊಟ್ಟ ಸಮಜಾಯಿಷಿಯ ಮೇಲೆ ಪಂಚರು,

ದೂರುದಾರರು ಹಾಗೂ ತನಿಖಾಧಿಕಾರಿಗಳು ಸಹಿ ಮಾಡಿ ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆ.

6. ಎದುರುದಾರರಿಗೆ ದಿನಾಂಕ 14/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 29/11/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ತಮ್ಮ ವಿಧಾನಸಭಾ ಕ್ಷೇತ್ರದ ಶಾಸಕರಿಗೆ ಫಲಾನುಭವಿಗಳನ್ನು ಆಯ್ಕೆ ಮಾಡಿಕೊಳ್ಳಲು ಪಟ್ಟಿ ಮಾಡಿ ಸಂಬಂಧಪಟ್ಟ ತಾಲ್ಲೂಕು ಅಭಿವೃದ್ಧಿ ಅಧಿಕಾರಿಯವರು ಸಲ್ಲಿಸುವುದು ಕರ್ತವ್ಯವಾಗಿರುತ್ತದೆ. ಹಾಗೂ ಸಂಬಂಧಪಟ್ಟ ಅಧಿಕಾರಿಯು ಫಲಾನುಭವಿಗಳ ಆಯ್ಕೆ ಸಮಿತಿಯ ಸದಸ್ಯ ಕಾರ್ಯದಶಿಯಾಗಿರುತ್ತಾರೆ. ಮಾನ್ಯ ಶಾಸಕರು ವಿವಿಧ ಯೋಜನೆಗಳಿಗೆ ಅನುಗುಣವಾಗಿ ಹಾಗೂ ಗುರಿಗಳಿಗೆ ಅನುಗುಣವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವುಳ್ಳವರಾಗಿರುತ್ತಾರೆ. ದೂರುದಾರರ ಅರ್ಜಿಯನ್ನು ಅವರ ದಾಖಲಾತಿಗಳನ್ನು ವಾಸಸ್ಥಳದ ಸೇವಾ ವ್ಯಾಪ್ತಿಗೆ ಬರುವ ಬ್ಯಾಂಕಿಗೆ ಸಾಲ ಮಂಜೂರಾತಿಗಾಗಿ ಬಂದ ಅರ್ಜಿಗಳನ್ನು ಕಳಿಸಲಾಗಿರುತ್ತದೆ. ಬ್ಯಾಂಕಿನ ಅಧಿಕಾರಿಗಳು ಅವರ ವ್ಯವಹಾರಗಳನ್ನು ಪರಿಶೀಲಿಸಿ ಸಾಲ ಮಂಜೂರಾತಿ ಮಾಡಿ ಫಲಾನುಭವಿಯ ವಂತಿಕೆಯಾಗಿ ಸಹಾಯ ಧನವನ್ನು ಬಿಡುಗಡೆ ಮಾಡುವಂತೆ ನಿಗಮಕ್ಕೆ ಬೇಡಿಕೆ ಪತ್ರ (ಕ್ಲೇಮ ಲೇಟರ್) ಕಳುಹಿಸಿಕೊಡುತ್ತಾರೆ. ಈ ಪ್ರಕರಣದಲ್ಲಿ ಫಲಾನುಭವಿಗೆ ಸಂಬಂಧಿಸಿದಂತೆ ಬೇಡಿಕೆ ಪತ್ರದಲ್ಲಿ ( ಕ್ಲೇಮ ಲೇಟರ್) ವಾಹನ ಸಾಲದ ಬದಲಾಗಿ ಡೈರಿ ಸಾಲ ಎಂದು ನಮೂದಿಸಿರುತ್ತಾರೆ. ನಿಗಮದಲ್ಲಿ ಬಂದಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಸಂಬಂಧಿಸಿದ ಬ್ಯಾಂಕಿಗೆ ಬೇಡಿಕೆ ಪತ್ರವನ್ನು ಬದಲಾವಣೆ ಮಾಡಿ ಕಳುಹಿಸಿಕೊಡುವಂತೆ ಕಡತದಲ್ಲಿ ನಮೂದಿಸಲಾಗಿದೆ. ಈ ಫಲಾನುಭವಿಗೆ ಇನ್ನು ಸಾಲ ಮಂಜೂರಾತಿಯಾಗಿರುವುದಿಲ್ಲ. ಹೀಗಿರುವಾಗ ಫಲಾನುಭವಿಯ ಸಹಾಯಧನದ ಚೆಕ್ ನೀಡಲು ರೂ.50,000/- ಲಂಚ ಕೊಡಬೇಕೆಂದು ಹೇಳಿರುವುದು ಸುಳ್ಳಾಗಿರುತ್ತದೆಂದು ಹೇಳಿ ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

7. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ ಇವುಗಳನ್ನು ಪರಿಶೀಲಿಸಿದಾಗ ದೂರುದಾರರು 2016-17ನೇ ಸಾಲಿನ ಉದ್ಯಮಶೀಲತಾ ಯೋಜನೆಯಲ್ಲಿ ಕಾರ ಲೋನ್ ಪಡೆಯಲು ಡಾ॥ ಬಿ.ಆರ್.ಅಂಬೇಡ್ಕರ ಅಭಿವೃದ್ಧಿ ನಿಗಮ, ಶಿವಮೊಗ್ಗದಲ್ಲಿ ಸಾಲ ಮತ್ತು ಸಹಾಯಧನಕ್ಕಾಗಿ ದಿ:13-05-2016 ರಂದು ಅರ್ಜಿ ಸಲ್ಲಿಸಿಕೊಂಡಿದ್ದು, ಸಾಲ ಮತ್ತು ಸಹಾಯಧನ ಪಡೆಯಲು ಆಯ್ಕೆಯಾಗಿ ರೂ. 7 ಲಕ್ಷ ಕಾರ್ ಲೋನ್ ಮಂಜೂರಾಗಿರುತ್ತದೆ. ಸದರಿ

ರೂ.7 ಲಕ್ಷಗಳಲ್ಲಿ ಸರ್ಕಾರದಿಂದ ಸಹಾಯಧನದ ರೂಪದಲ್ಲಿ ಮಂಜೂರಾದ ರೂ.3,50,000/- ಗಳ ಚೆಕ್ ನೀಡಲು ಎದುರುದಾರರು ರೂ. 50,000/- ಲಂಚದ ಬೇಡಿಕೆಯಿಟ್ಟಾಗ ರೂ.40,000/- ಹೊಂದಿಸಿಕೊಂಡು ಬಂದಾಗ ಎದುರುದಾರರು ಲಂಚದ ಹಣವನ್ನು ತಂದಿರುವ ಬಗ್ಗೆ ಕೇಳಿದಾಗ ದೂರುದಾರರು ಎದುರುದಾರರಿಗೆ ಕೊಡಲು ಹೋದಾಗ ಎದುರುದಾರರು ತಮ್ಮ ಜೀಪಿನಲ್ಲಿರುವ ಚಾಲಕನಾದ ಕುಮಾರ ಕೆ ರವರ ಕೈಯಲ್ಲಿ ಹೇಳಿ ಕೊಡುವಂತೆ ಸೂಚಿಸಿದಾಗ ಕುಮಾರ.ಕೆ ರವರು ದೂರುದಾರರಿಂದ ರೂ.40,000/- ಗಳ ಲಂಚದ ಹಣವನ್ನು ಪಡೆದಿರುತ್ತಾರೆ. ಎದುರುದಾರರು ಕುಮಾರ ಕೆ ರವರ ಮುಖಾಂತರ ಲಂಚದ ಹಣವನ್ನು ಪಡೆದು ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

8. ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಆರ್. ಕೆ. ಮಹಾದೇವಸ್ವಾಮಿ ಬಿನ್ ಲೇಟ್ ಕುಮಾರಯ್ಯ, ವ್ಯವಸ್ಥಾಪಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ, ಶಿವಮೊಗ್ಗ ಜಿಲ್ಲೆ ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/4/22

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
ಉಪಲೋಕಾಯುಕ್ತರು-2
ಕರ್ನಾಟಕ ರಾಜ್ಯ, ಬೆಂಗಳೂರು.